# ಸಣ್ಣ ಉಳಿತಾಯ, ದೊಡ್ಡ ಭವಿಷ್ಯ

# SMALL SAVINGS, BIG FUTURE

## ರಿಯಾ ಮತ್ತು ಯಶ್ ಅವರ ಕಥೆ – ಸಣ್ಣ ಉಳಿತಾಯದಿಂದ ಭವಿಷ್ಯ ಭದ್ರಪಡಿಸುವ ಸರಳ ಮಾರ್ಗ

**The Story of Riya and Yash – A Simple Way to Build a Secure Future Through Small Savings**

**ಪುಸ್ತಕ ಪರಿಚಯ**

ರಿಯಾ ಮತ್ತು ಯಶ್ ಇಬ್ಬರು ಸಹೋದರ–ಸಹೋದರಿ.
ಒಂದು ದಿನ ಅವರು ತಮ್ಮ ಪೋಷಕರ ಜೊತೆ ಹಣದ ಬಗ್ಗೆ ಮಾತನಾಡಲು ಶುರುಮಾಡಿದರು.
ಅವರ ಕುಟುಂಬದ ಆದಾಯ ದೊಡ್ಡದಿಲ್ಲ. ಅಪ್ಪಾ ಕೆಲಸಕ್ಕೆ ಹೋಗುತ್ತಾರೆ. ಅಮ್ಮಾ ಮನೆಯ ಕೆಲಸಗಳನ್ನೂ, ಕೆಲವೊಮ್ಮೆ ಇತರರ ಮನೆಗಳಲ್ಲಿ ಸಹಾಯ ಮಾಡುವ ಕೆಲಸವನ್ನೂ ಮಾಡುತ್ತಾರೆ.
ಆದರೂ ರಿಯಾ ಮತ್ತು ಯಶ್ ಒಂದು ಮಹತ್ವದ ವಿಚಾರ ಕಲಿತರು —

**ಸ್ವಲ್ಪ ಹಣ ಉಳಿಸಿದರೂ, ಅದು ಸಮಯದೊಂದಿಗೆ ದೊಡ್ಡ ಸಹಾಯವಾಗಬಹುದು.**

ಈ ಪುಸ್ತಕದಲ್ಲಿ ರಿಯಾ ಮತ್ತು ಯಶ್ ಅವರ ಸರಳ ಕಥೆ ಮೂಲಕ ನಾವು ಕಲಿಯುವದು:

- ಹಣವನ್ನು ಹೇಗೆ ಬಳಸಬೇಕು
- ಹೇಗೆ ಸ್ವಲ್ಪ ಸ್ವಲ್ಪವಾಗಿ ಉಳಿಸಬೇಕು
- ಅನಗತ್ಯ ಖರ್ಚುಗಳನ್ನು ಹೇಗೆ ತಪ್ಪಿಸಬೇಕು
- ಆರೋಗ್ಯ ಮತ್ತು ತುರ್ತು ಪರಿಸ್ಥಿತಿಗಳಿಗೆ ಹಣವನ್ನು ಹೇಗೆ ಸಿದ್ಧವಾಗಿಡಬೇಕು
- ಸಮಯದೊಂದಿಗೆ ಹಣ ಹೇಗೆ ಬೆಳೆಯುತ್ತದೆ

**ಈ ಸರಳ ಪಾಠಗಳು ಮಕ್ಕಳಿಗೂ ಕುಟುಂಬಗಳಿಗೂ ಉತ್ತಮ ಜೀವನ ಕಟ್ಟಲು ಸಹಾಯ ಮಾಡುತ್ತವೆ.**

**Introduction**

Riya and Yash are brother and sister.
One day, they began talking with their parents about money.
Their family does not earn a very large income. Their father works hard every day, and their mother manages the home and sometimes helps with work in other houses.
But Riya and Yash learned an important lesson —

**Even Small Savings Can Become Very Helpful Over Time**

Through their simple story, this book teaches:

- how to use money wisely
- how to save small amounts regularly
- how to avoid unnecessary spending
- how to prepare for health and emergency needs
- how money slowly grows over time

**These simple lessons can help both children and families build a better future.**




**Ronan Vasanth**
**Mallya Aditi International School**
**Bengaluru**

## ಅಧ್ಯಾಯ 1

## ಇಂದಿನಿಂದ ಉಳಿತಾಯ ಪ್ರಾರಂಭಿಸೋಣ

ಒಂದು ಸಂಜೆ ರಿಯಾ ಮತ್ತು ಯಶ್ ತಮ್ಮ ಅಪ್ಪ ಮತ್ತು ಅಮ್ಮ ಜೊತೆ ಕುಳಿತಿದ್ದರು.

**ರಿಯಾ ಕೇಳಿತು:**

"ಅಪ್ಪಾ, ನಾವು ಹಣವನ್ನು ಹೇಗೆ ಉಳಿಸಬಹುದು?"

**ಅಪ್ಪಾ ನಗೆಮಾಡಿ ಹೇಳಿದರು:**

"ಹಣ ಉಳಿಸುವುದು ದೊಡ್ಡ ವಿಷಯವಲ್ಲ. ಸ್ವಲ್ಪ ಹಣ ಬಂದರೂ ಅದರಲ್ಲಿ ಒಂದು ಭಾಗವನ್ನು ಉಳಿಸಬೇಕು."

**ಯಾಶ್ ಕೇಳಿದನು:**

"ಅದು ಏಕೆ ಅಪ್ಪಾ?"

**ಅಪ್ಪಾ ಹೇಳಿದರು:**

"ಜೀವನದಲ್ಲಿ ಆಹಾರ, ಮನೆ, ಶಿಕ್ಷಣ, ಆರೋಗ್ಯ ಎಲ್ಲಕ್ಕೂ ಹಣ ಬೇಕಾಗುತ್ತದೆ. ನಾವು ಸ್ವಲ್ಪವೂ ಉಳಿಸಿದರೆ, ಮುಂದೆ ಅವುಗಳಿಗೆ ಸಹಾಯವಾಗುತ್ತದೆ."

**ತಾಯಿ ಹೇಳಿದರು:**

"ನಮ್ಮ ಆದಾಯ ದೊಡ್ಡದಿಲ್ಲ. ಆದರೂ ತಿಂಗಳಿಗೆ ಸ್ವಲ್ಪ ಹಣ ಉಳಿಸಿದರೆ ಅದು ಮುಂದೆ ದೊಡ್ಡ ಸಹಾಯವಾಗುತ್ತದೆ."

**ಉದಾಹರಣೆ**

₹100 ತಿಂಗಳಿಗೆ ಉಳಿಸಿದರೆ

10 ವರ್ಷಗಳಲ್ಲಿ ₹12,000 ಅಥವಾ ಹೆಚ್ಚು

**ಪಾಠ**

ಇಂದಿನಿಂದಲೇ ಸ್ವಲ್ಪ ಉಳಿತಾಯ ಪ್ರಾರಂಭಿಸಬೇಕು.

## Chapter 1

## Let Us Start Saving Today

One evening, Riya and Yash were sitting with their parents.

**Riya asked,**

"Dad, how can we save money?"

**Their father smiled and said:**

"Saving money is not difficult. Even if you earn a small amount, you should save a part of it."

**Yash asked,**

"Why is that important?"

**Their father replied:**

"In life we need money for food, home, education, and health. If we save even a little, it will help us in the future."

**Their mother added:**

"Our income is not very big, but if we save a small amount every month, it can become very helpful later."


**Example**

If you save ₹100 every month

In 10 years ₹12,000 or more

**Lesson**

Start saving even a small amount from today.




## ಅಧ್ಯಾಯ 2

## ಹಣವನ್ನು ಹೇಗೆ ಯೋಜಿಸಬೇಕು

**ಮರುದಿನ ರಿಯಾ ಕೇಳಿತು:**

"ಅಮ್ಮಾ, ನಾವು ಹಣವನ್ನು ಹೇಗೆ ಬಳಸಬೇಕು ಎಂದು ಹೇಗೆ ನಿರ್ಧರಿಸೋಣ?"

**ತಾಯಿ ಹೇಳಿದರು:**

"ಮೊದಲು ಅಗತ್ಯವಾದ ಖರ್ಚುಗಳನ್ನು ನೋಡಬೇಕು."

**ಉದಾಹರಣೆ:**

ಆಹಾರ

ಶಿಕ್ಷಣ

ಆರೋಗ್ಯ

ಮನೆ

ಈ ಅಗತ್ಯಗಳು ಪೂರ್ತಿಯಾದ ನಂತರ ಉಳಿದ ಹಣದಲ್ಲಿ ಸ್ವಲ್ಪವನ್ನು ಉಳಿಸಬೇಕು.

**ಅಪ್ಪಾ ಹೇಳಿದರು:**

"ಹಣವನ್ನು ಯೋಜನೆ ಮಾಡಿಕೊಂಡು ಬಳಸಿದರೆ, ನಾವು ಸಾಲ ತೆಗೆದುಕೊಳ್ಳುವ ಅವಶ್ಯಕತೆ ಕಡಿಮೆ ಆಗುತ್ತದೆ."

**ಪಾಠ**

ಮೊದಲು ಅಗತ್ಯಗಳಿಗೆ ಹಣ.

ನಂತರ ಉಳಿತಾಯ.

## Chapter 1

## Planning Our Money

**The next day, Riya asked:**

"Mom, how do we decide how to spend our money?"

**Her mother said:**

"First we should spend on essential needs."

**Examples:**

Food

Education

Health

Home

After meeting these needs, we should save a small part of the remaining money.

**Their father said:**

"When we plan our money properly, we avoid unnecessary debt."

**Lesson**

Spend on needs first.

Save a part of the money.

## ಅಧ್ಯಾಯ 3

### ಉಳಿತಾಯ ಮಾಡಲು ಸುಲಭ ಮಾರ್ಗಗಳು

**ಯಾಶ್ ಕೇಳಿದನು:**

"ಅಪ್ಪಾ, ನಾವು ಹಣವನ್ನು ಎಲ್ಲಿಗೆ ಉಳಿಸಬಹುದು?"

**ಅಪ್ಪಾ ಹೇಳಿದರು:**

"ಹಣವನ್ನು ಸುರಕ್ಷಿತವಾಗಿ ಉಳಿಸಲು ಕೆಲವು ಮಾರ್ಗಗಳಿವೆ."

**ಉದಾಹರಣೆ:**

ಬ್ಯಾಂಕ್ ಉಳಿತಾಯ ಖಾತೆ

ತಿಂಗಳಿಗೆ ನಿಗದಿತ ಹಣ ಇಡುವ ಬ್ಯಾಂಕ್ ಯೋಜನೆ

ಅಂಚೆ ಕಚೇರಿ ಉಳಿತಾಯ ಯೋಜನೆಗಳು

ಸರ್ಕಾರದ ದೀರ್ಘಕಾಲದ ಉಳಿತಾಯ ಯೋಜನೆಗಳು

**ತಾಯಿ ಹೇಳಿದರು:**

"ಈ ಮಾರ್ಗಗಳಲ್ಲಿ ಹಣ ಸುರಕ್ಷಿತವಾಗಿರುತ್ತದೆ ಮತ್ತು ನಿಧಾನವಾಗಿ ಹೆಚ್ಚಾಗುತ್ತದೆ."

**ಪಾಠ**

ಸುರಕ್ಷಿತ ಸ್ಥಳದಲ್ಲಿ ನಿಯಮಿತವಾಗಿ ಹಣ ಉಳಿಸಬೇಕು.

## Chapter 3

### Simple Ways to Save Moneyz

**Yash asked:**

"Dad, where can we keep our savings?"

**Their father explained:**

"There are several safe places where we can save money."

**Examples:**

Bank savings account

Monthly bank deposit schemes

Post office savings schemes

Government long-term savings schemes

**Their mother added:**

"In these places the money stays safe and slowly grows."

**Lesson**

Save regularly in safe places.

## ಅಧ್ಯಾಯ 4

### ಹಣ ಹೇಗೆ ಬೆಳೆಯುತ್ತದೆ

**ಒಂದು ದಿನ ಅಪ್ಪಾ ಹೇಳಿದರು:**

"ನೀವು ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟರೆ, ಬ್ಯಾಂಕ್ ನಿಮಗೆ ಬಡ್ಡಿ ಕೊಡುತ್ತದೆ."

ಅಂದರೆ ನೀವು ಉಳಿಸಿದ ಹಣ ನಿಧಾನವಾಗಿ ಹೆಚ್ಚಾಗುತ್ತದೆ.

**ಉದಾಹರಣೆ**

₹500 ತಿಂಗಳಿಗೆ ಉಳಿಸಿದರೆ

5 ವರ್ಷಗಳಲ್ಲಿ ಸುಮಾರು ₹30,000 ಅಥವಾ ಹೆಚ್ಚು

10 ವರ್ಷಗಳಲ್ಲಿ ಸುಮಾರು ₹1,20,000 ಅಥವಾ ಹೆಚ್ಚು

**ಪಾಠ**

ಸ್ವಲ್ಪ ಉಳಿತಾಯ + ಸಮಯ = ಹೆಚ್ಚು ಹಣ

## Chapter 4

### How Money Grows

**One day their father explained:**

"When you keep money in a bank, the bank gives you interest."

This means the money you save slowly increases.

**Example**

If you save ₹500 every month:

After 5 years about ₹30,000 or more

After 10 years about ₹1,20,000 or more

Small savings + time = larger savings.




## ಅಧ್ಯಾಯ 5

### ಆರೋಗ್ಯಕ್ಕಾಗಿ ಉಳಿತಾಯ

**ತಾಯಿ ಹೇಳಿದರು:**

"ಜೀವನದಲ್ಲಿ ಆರೋಗ್ಯ ತುಂಬಾ ಮುಖ್ಯ."

ಒಮ್ಮೆ ಯಾರಾದರೂ ಅಸ್ವಸ್ಥರಾದರೆ ಅಥವಾ ಆಸ್ಪತ್ರೆ ಖರ್ಚು ಬಂದರೆ, ಹಣ ಬೇಕಾಗುತ್ತದೆ.

ಆ ಸಮಯದಲ್ಲಿ ಉಳಿಸಿದ ಹಣ ದೊಡ್ಡ ಸಹಾಯವಾಗುತ್ತದೆ.

**ಉದಾಹರಣೆ**

₹200 ತಿಂಗಳಿಗೆ ಉಳಿಸಿದರೆ

2 ವರ್ಷಗಳಲ್ಲಿ ₹4,800

**ಪಾಠ**

ಆರೋಗ್ಯ ಮತ್ತು ತುರ್ತು ಪರಿಸ್ಥಿತಿಗಳಿಗಾಗಿ ಹಣ ಉಳಿಸಬೇಕು.

## Chapter 5

### Saving for Health Needs

**Their mother said:**

"Health is very important in life."

If someone falls sick or needs hospital care, money is required.

Savings can help during such times.

**Example**

Saving ₹200 every month

After 2 years □ ₹4,800

**Lesson**

Always keep some savings for health and emergencies.

## ಅಧ್ಯಾಯ 6

### ಅನಗತ್ಯ ಖರ್ಚುಗಳನ್ನು ತಪ್ಪಿಸೋಣ

**ಯಾಶ್ ಕೇಳಿದನು:**

"ಅಪ್ಪಾ, ಕೆಲವರು ಸಿಗರೇಟ್ ಮತ್ತು ಮದ್ಯಕ್ಕೆ ಹಣ ಖರ್ಚು ಮಾಡುತ್ತಾರೆ. ಅದು ಸರಿಯೇ?"

ಅಪ್ಪಾ ಹೇಳಿದರು:

"ಅವು ಆರೋಗ್ಯಕ್ಕೂ ಹಾನಿ. ಹಣಕ್ಕೂ ನಷ್ಟ."

ಆ ಹಣವನ್ನು ಉಳಿಸಿದರೆ ಕುಟುಂಬಕ್ಕೆ ಹೆಚ್ಚು ಉಪಯೋಗವಾಗುತ್ತದೆ.

ಪಾಠ

ಅಗತ್ಯವಿಲ್ಲದ ಖರ್ಚುಗಳನ್ನು ತಪ್ಪಿಸಬೇಕು.




## Chapter 6

### Avoid Unnecessary Spending

**Yash asked:**

"Dad, some people spend money on cigarettes and alcohol.

Is that good?"

Their father replied,

"It harms health and wastes money."

If that money is saved, it can help the family.

Lesson

Avoid unnecessary spending.

**ಅಧ್ಯಾಯ 7**

**ಸಾಲದಿಂದ ಎಚ್ಚರ**

**ಅಪ್ಪಾ ಹೇಳಿದರು:**

“ಕೆಲವೊಮ್ಮೆ ತುರ್ತು ಪರಿಸ್ಥಿತಿಯಲ್ಲಿ ಸಾಲ ತೆಗೆದುಕೊಳ್ಳಬೇಕಾಗಬಹುದು. ಆದರೆ ಅನಗತ್ಯ ಸಾಲ ತೆಗೆದುಕೊಳ್ಳಬಾರದು.”

ಸಾಲಕ್ಕೆ ಬಡ್ಡಿ ಕೊಡಬೇಕು.

ಅದರಿಂದ ಹಣ ಉಳಿಸಲು ಕಷ್ಟವಾಗುತ್ತದೆ.

ಪಾಠ

ಅನಗತ್ಯ ಸಾಲ ತಪ್ಪಿಸಬೇಕು.

**Chapter 7**

**Be Careful with Debt**

**Their father explained:**

“Sometimes loans may be needed in emergencies, but unnecessary borrowing should be avoided.”

Loans require interest payments.

This makes saving more difficult.

**Lesson**

Avoid unnecessary debt.

**ಅಧ್ಯಾಯ 8**

**ಹಣದ ಮರದ ಕಥೆ**

ಒಂದು ದಿನ ಅಪ್ಪಾ ಹೇಳಿದರು:

“ಹಣ ಒಂದು ಮರದಂತೆ.”

ಮರ ಬೆಳೆಯಲು ಮೂರು ಮುಖ್ಯ ವಿಷಯಗಳು ಬೇಕು:

ಬೀಜ

ಆರೈಕೆ

ಸಮಯ

ಹಣವೂ ಹಾಗೆಯೇ ಬೆಳೆಯುತ್ತದೆ.


**ಬೀಜ** – ನೀವು ಉಳಿಸಿದ ಮೊದಲ ಹಣ

**ಆರೈಕೆ** – ನಿಯಮಿತ ಉಳಿತಾಯ

**ಸಮಯ** – ಹಣ ನಿಧಾನವಾಗಿ ಹೆಚ್ಚಾಗುತ್ತದೆ

ಸಣ್ಣ ಬೀಜ - ದೊಡ್ಡ ಮರ

ಸಣ್ಣ ಉಳಿತಾಯ - ದೊಡ್ಡ ಭವಿಷ್ಯ



**Chapter 8**

**The Money Tree Story**

One day their father said,

“Money is like a tree.”

For a tree to grow it needs three things:

A seed

Care

Time

Money grows the same way.

**Seed** – the first money you save

**Care** – regular saving

**Time** – the money slowly grows

Small seed - big tree

Small savings - strong future

**ಮುಖ್ಯ ಪಾಠಗಳು:**

**1. ಸ್ವಲ್ಪ ಆದಾಯ ಬಂದಾಗಲೇ ಉಳಿತಾಯ ಪ್ರಾರಂಭಿಸು**

**2. ಮೊದಲು ಅಗತ್ಯಗಳಿಗೆ ಹಣ ಬಳಸು**

**3. ತಿಂಗಳಿಗೆ ಸ್ವಲ್ಪ ಹಣ ಉಳಿಸು**

**4. ಆರೋಗ್ಯಕ್ಕಾಗಿ ಹಣ ಉಳಿಸು**

**5. ಅನಗತ್ಯ ಖರ್ಚುಗಳನ್ನು ತಪ್ಪಿಸು**

**5. ಸಾಲ ತಪ್ಪಿಸೋಣ**

**6. ಸಮಯದೊಂದಿಗೆ ಹಣ ಬೆಳೆಯುತ್ತದೆ**

**Key Lessons:**

**1. Start saving even with small income**

**2. Spend on needs first**

**3. Save a little every month**

**4. Save for health and emergencies**

**5. Avoid unnecessary spending**

**6. Avoid unnecessary debt**

**7. Savings grow with time**

**ಕೊನೆಯ ಸಂದೇಶ**

ಸಣ್ಣ ಉಳಿತಾಯ ಇಂದು

ದೊಡ್ಡ ಭದ್ರತೆ ನಾಳೆ.

ಇಂದಿನಿಂದ ಸ್ವಲ್ಪವೂ ಉಳಿಸಿ,

ನಿಮ್ಮ ಭವಿಷ್ಯವನ್ನು ಬಲಪಡಿಸಿ.

**Final Message**

Small savings today

create security tomorrow.

Start saving today.

Build a stronger future.

**My First Savings Plan**

**Goal:** ____________________

**Monthly Saving:** ____________________

**How long I will save:** ____________________

**My Target:** ____________________